ಅಧ್ಯಕ್ಷರು : ಸರ್ಕಾರದವರು ಕಷ್ಟದಲ್ಲಿದ್ದಾರೆಂದು, ಕಾಂಪ್ರೊಮೈಸ್‌ಗೋಸ್ಕರ ಮಾನ್ಯ ಸದಸ್ಯರು ಆ ಸಲಹೆ ಕೊಡುತ್ತಿದ್ದಾರೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ನಿಜವಾಗಿಯೂ ರೈತರಲ್ಲಿ ಹಣ ಇಲ್ಲ. ಕುಡಿಯುವ ನೀರಿನ ಜಾವಿ ಬತ್ತಿ ಹೋಗಿವೆ. ಅದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆದರೆ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಆಸೆ ತಮಗಿದ್ದರೆ ಇಷ್ಟನ್ನಾದರೂ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ನಾನು 3–4 ಸಾರಿ ಆ ಕಡೆ ಪ್ರವಾಸ ಮಾಡಿದಾಗ, ಪ್ರತ್ಯಕ್ಷವಾಗಿ ನೋಡಿದ್ದೇನೆ. ಹೊಳೆಗಳಲ್ಲಿ ನೀರಿಲ್ಲ, ಬೋರ್‌ವೆಲ್ಲನ್ನು ಉಪಯೋಗ ಮಾಡಿಲ್ಲ ಎಂದು ನಿಮ್ಮ ಕೆ.ಇ.ಬಿ. ಅಧಿಕಾರಿಗಳೇ ಒಪ್ಪಿಕೊಳ್ಳುತ್ತಿದ್ದಾರೆ. ಮಾನ್ಯ ನಂಜುಂಡಸ್ವಾಮಿಯವರಿಗೆ ಮಾನ್ಯ ಅಧ್ಯಕ್ಷರು ಹೇಳಿದಂತೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟದಲ್ಲಿರಬಹುದು. ತಾವು ರೈತರ ಹಿತದೃಷ್ಟಿಯಿಂದ ಸಂಪೂರ್ಣವಾಗಿ ಬಿಲ್ ಕಟ್ಟುವಂತೆ, ಅದನ್ನು ವಜಾ ಮಾಡತಕ್ಕ ತೀರ್ಮಾನವನ್ನು ತೆಗೆದುಕೊಂಡರೆ, ಬಿಜಾಪುರ ಜಿಲ್ಲೆಯ ರೈತರು ತಮಗೆ ಧನ್ಯವಾದಗಳನ್ನು ಹೇಳುತ್ತಾರೆ. ಅದರಿಂದ ಅವರು ಬದುಕುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸಂಪೂರ್ಣ ಬಿಲ್ಲನ್ನು ವಜಾ ಮಾಡತಕ್ಕ ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಚುಪ್ರ : 122 (434)

ಅಧ್ಯಕ್ಷರು : ಅಂಜನಮೂರ್ತಿಯವರೆ, ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರು 15 ದಿವಸ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನನ್ನ ಪ್ರಶ್ನೆಗೆ ಉತ್ತರ ಬರಲೇ ಇಲ್ಲ.

ಅಧ್ಯಕ್ಷರು : ಅವರು ಉತ್ತರ ಹೇಳಿ ಆಯಿತು.

ಬಸವಕಲ್ಯಾಣದಲ್ಲಿರುವ ನವೋದಯ ವಿದ್ಯಾಲಯದ ಕಟ್ಟಡದ ಬಗ್ಗೆ

429. ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಲ್ಲಿನ ನವೋದಯ ವಿದ್ಯಾಲಯದ ಕಟ್ಟಡದ ಕೆಲಸ ಎಂದಿನಿಂದ ಪ್ರಾರಂಭಿಸಲಾಯಿತು?

ಆ) ಕಟ್ಟಡ ಕೆಲಸ ಕಾರ್ಯಗಳು ಈಗ ಯಾವ ಹಂತದಲ್ಲಿದೆ?

ಇ) ಕಟ್ಟಡವು ಯಾವಾಗ ಸಂಪೂರ್ಣಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

(ಶ್ರೀ ಎಂ. ವೀರಪ್ಪಮೊಯಿಲಿಯವರ ಪರವಾಗಿ),–

ಅ) ಫೆಬ್ರವರಿ – 1990.

ಆ) ಪ್ರಥಮ ಹಂತದ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

ಇ) ನವೋದಯ ವಿದ್ಯಾಲಯ ಸಮಿತಿ ಹೈದರಾಬಾದ್ ಪ್ರಾದೇಶಿಕ ಸಂಸ್ಥೆಯ ಮೂಲಕ ಕಟ್ಟಡಕ್ಕೆ ಅನುದಾನ ನೀಡಿದ್ದು ಮತ್ತು ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಮಾಡಿಸುತ್ತಿದ್ದು, ಆ ಜವಾಬ್ದಾರಿಯನ್ನು ಕೇಂದ್ರ ಸರ್ಕಾರವೇ ಹೊಂದಿದೆ. ಆದ್ದರಿಂದ ಈ ಕಟ್ಟಡ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಬಗ್ಗೆ ನಿರ್ದಿಷ್ಟ ದಿನಾಂಕವನ್ನು ನೀಡುವುದು ರಾಜ್ಯ ಸರ್ಕಾರಕ್ಕೆ ಕಷ್ಟ ಸಾಧ್ಯ.

ಶ್ರೀ ಬಸವರಾಜಪಾಟೀಲ್ ಅಟ್ಟೂರ್ : –ಮಾನ್ಯ ಅಧ್ಯಕ್ಷರೇ, ಬಸವಕಲ್ಯಾಣ ಪಟ್ಟಣದಲ್ಲಿ ನವೋದಯ ಶಾಲೆ ಪ್ರಾರಂಭವಾದುದು 1990ನೇ ಇಸವಿಯಲ್ಲಿ. ಇದು ಒಂದು ಕೇಂದ್ರ ಸರ್ಕಾರದ ಕಾರ್ಯಕ್ರಮ. ಈ ಒಂದು ದಿಸೆಯಲ್ಲಿ ಸಂಪೂರ್ಣವಾಗಿ ನಮ್ಮ ಜಿಲ್ಲೆಯ ವಿದ್ಯಾರ್ಥಿಗಳು ನಮ್ಮ ನವೋದಯ ಶಾಲೆಯಲ್ಲಿ ಓದುತ್ತಿದ್ದಾರೆ.